ಆ) ಹಾಗಿದ್ದಲ್ಲಿ, ಎಂದಿನಿಂದ ಬಸ್ಸಿನ ವ್ಯವಸ್ಥೆ ಮಾಡಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಆ) ಹೌದು

ಆ) ಕಳಸ ಮತ್ತು ಹೊರನಾಡಿನ ಮಧ್ಯೆ ಇರುವ ಸೇತುವೆಯ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಸದರಿ ಬೇಡಿಕೆಯನ್ನು ಪರಿಶೀಲಿಸಲಾಗುವುದು.

ಬೆಂಗಳೂರು ನಗರಕ್ಕೆ ನ್ಯಾಯಬೆಲೆ ಅಂಗಡಿಗಳ ಮೂಲಕ ಸೀಮೆಎಣ್ಣೆ ವಿತರಣೆ.

202. ಶ್ರೀ ರಾಮಲಿಂಗ ರೆಡ್ಡಿ (ಜಯನಗರ):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೆಂಗಳೂರು ನಗರಕ್ಕೆ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆಗಾಗಿ ತಿಂಗಳಿಗೆ ಬೇಕಾಗುವ ಸೀಮೆಎಣ್ಣೆ ಪ್ರಮಾಣವೆಷ್ಟು ?

2) ಸೀಮೆಎಣ್ಣೆಯನ್ನು ಮಾರಾಟ ಮಾಡುವ ಹಾಕರುಗಳು ಅಳತೆ ಮಾಡುವಾಗ ಅವ್ಯವಹಾರ ಮಾಡುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

3) ಹಾಗಿದ್ದರೆ, ಸೀಮೆಎಣ್ಣೆಯನ್ನು ಪೊಟ್ಟಣಗಳ ಮೂಲಕ ಸರಬರಾಜು ಮಾಡಲು ಕೈಗೊಂಡ ಕ್ರಮಗಳಾವುವು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

1) 11,480 ಕಿ.ಲೀಟರ್

2) ಹೌದು – ಪಡಿತರ ಚೀಟಿದಾರರಿಗೆ ಸರಿಯಾದ ಅಳತೆಯಂತೆ ಸೀಮೆಎಣ್ಣೆಯನ್ನು ವಿತರಿಸುವಂತಾಗಲು ಆಗಿಂದಾಗ್ಗೆ ತಪಾಸಣೆ ಮಾಡಲಾಗುತ್ತಿದೆ. ಸೀಮೆಎಣ್ಣೆಯನ್ನು ಮೊದಲು ಬಕೆಟ್ಟಿಗೆ ಹಾಕಿ ನಂತರ ಅಳತೆಯ ಮೂಲಕ ಬಕೆಟ್ಟಿನಿಂದ ಎತ್ತಿ ಕಾರ್ಡುದಾರರಿಗೆ ನೀಡುವಂತೆ ಹಾಗೂ ನೇರವಾಗಿ ಸೀಮೆಎಣ್ಣೆ ಟ್ಯಾಂಕ್ ನಲ್ಲಿಯಿಂದ ಅಳೆಯಬಾರದೆಂದು ವ್ಯಾಪಾರಿಗಳಿಗೆ ಸೂಚನೆ ನೀಡಲಾಗಿದೆ.

3) ಸೀಮೆಎಣ್ಣೆಯನ್ನು ಪೊಟ್ಟಣಗಳ ಮೂಲಕ ಸರಬರಾಜು ಮಾಡುವ ಪ್ರಸ್ತಾವನೆ ಇಲ್ಲ.

ರಾಜ್ಯದಲ್ಲಿ ಸೀಮೆಎಣ್ಣೆ ಅಭಾವ.

356. ಶ್ರೀ ಬಿ.ಹೆಚ್. ಬನ್ನಿಕೋಡ್, (ಹಿರೇಕೆರೂರು):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸೀಮೆಎಣ್ಣೆ ಅಭಾವ ಇರುವುದು ಹಾಗೂ ಸಮರ್ಪಕವಾಗಿ ವಿತರಣೆ ಆಗದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಹೆಚ್ಚುವರಿ ಪ್ರಮಾಣದ ಸೀಮೆಎಣ್ಣೆ ಪೂರೈಸಲು ಮತ್ತು ಸಮರ್ಪಕವಾದ ವಿತರಣೆ ಮಾಡಲು ಸರ್ಕಾರವು ಕೈಗೊಂಡ ಮತ್ತು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

ಆ) ರಾಜ್ಯದಲ್ಲಿ ಸೀಮೆಎಣ್ಣೆಯ ಅಭಾವ ಸ್ವಲ್ಪ ಮಟ್ಟಿಗೆ ಇರುವುದು.

ಆ) ರಾಜ್ಯಕ್ಕೆ ಸೀಮೆಎಣ್ಣೆ ಬೇಡಿಕೆ 67,000ಕಿ.ಲೀ. ಆಗಿದ್ದು ಕೇಂದ್ರ ಸರ್ಕಾರವು ತಿಂಗಳಿಗೆ 47,513 ಕಿ.ಲೀ. ಸೀಮೆಎಣ್ಣೆಯನ್ನು ಹಂಚಿಕೆ ಮಾಡುತ್ತಿದೆ, ರಾಜ್ಯಕ್ಕೆ ಹೆಚ್ಚಿನ ಪ್ರಮಾಣದ ಸೀಮೆಎಣ್ಣೆಯನ್ನು ಹಂಚಿಕೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಸೀಮೆಎಣ್ಣೆ ಹಂಚಿಕೆ ಮಾಡುವ ಹಾಕರುಗಳನ್ನು ಹಾಗೂ ನ್ಯಾಯಬೆಲೆ ಅಂಗಡಿಗಳನ್ನು ಪರೀಕ್ಷಿಸಿ ವಿತರಣೆಯನ್ನು ಸಮರ್ಪಕಗೊಳಿಸಲಾಗುತ್ತಿದೆ. ಹಾಗೂ ಹೊಸದಾಗಿ ರಚಿಸಲಾದ ಜಾಗೃತ ಸಮಿತಿಗಳು ಸೀಮೆಎಣ್ಣೆ ವಿತರಣೆಯನ್ನು ಸಮರ್ಪಕವಾಗಿದೆಂಬುದನ್ನು ಗಮನಿಸುವುದು.

ಹರಿಜನ ಗಿರಿಜನ ನ್ಯಾಯಬೆಲೆ ಅಂಗಡಿಗಳಲ್ಲಿ ಮೀಸಲಾತಿಯ ವಿಚಾರ.

782. ಶ್ರೀ ಕರಿಯಣ್ಣ (ಹೊಳೆಹೊನ್ನೂರು):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ಹರಿಜನ ಗಿರಿಜನರಿಗೆ ನೀಡಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಇ) ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ಶೇಕಡ 18 ರಂತೆ ನ್ಯಾಯಬೆಲೆ ಅಂಗಡಿಗಳನ್ನು ಕೊಡುವ ವಿಷಯವು ಸರ್ಕಾರದ ಮುಂದಿದೆಯೇ ?

ಈ) ಹಾಗಿದ್ದಲ್ಲಿ ಎಂದಿನಿಂದ ಕೊಡಲಾಗುವುದು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

ಅ) 18,322

ಆ) 890

(ಜಿಲ್ಲಾವಾರು ವಿವರಣೆಯನ್ನು ಲಗತ್ತಿಸಿದೆ)

ಇ) ಸರ್ಕಾರದ ಆದೇಶ ಸಂಖ್ಯೆ: ಎಫ್‌ಟಿಡಿ 338 ಡಿಆರ್‌ಎ 91 ದಿನಾಂಕ: 10–3–92ರಲ್ಲಿ ಆದೇಶಿಸಿರುವಂತೆ ಪರಿಶಿಷ್ಟ ಜಾತಿಯವರಿಗೆ ಶೇಕಡ 15 ಹಾಗೂ ಪರಿಶಿಷ್ಟ ವರ್ಗದವರಿಗೆ ಶೇಕಡ 5ರಷ್ಟನ್ನು ನಿಗದಿಪಡಿಸಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗುತ್ತಿದೆ.

ಈ) ಮೇಲಿನ ಆದೇಶ ಹೊರಡಿಸಿದ ದಿನಾಂಕದಿಂದ.